




## ಹೆಸರಾಯಿತು ಕರ್ನಾಟಕ: ಚಿನ್ನದ ಚೌಕಟ್ಟು

ಮೈಸೂರು ರಾಜ್ಯವನ್ನು ಕರ್ನಾಟಕವೆಂದು ಕರೆದ ಚಾರಿತ್ರಿಕ ಘಟನೆಗೆ ಐವತ್ತು ವರ್ಷಗಳು ತುಂಬಿದ್ದು 2023ರ ನವೆಂಬರ್ 1ರಂದು. ಈ ಸಂದರ್ಭ ನಾಡಿನುದ್ದಕ್ಕೂ ಸಹಜವಾಗಿಯೇ ಸಂಭ್ರಮದ ತರಂಗಗಳನ್ನು ಉಂಟುಮಾಡಿದೆ. ಮೈಸೂರು ರಾಜ್ಯವನ್ನು ಕರ್ನಾಟಕ ಎಂದು ಕರೆಯಬೇಕೆನ್ನುವ ಅಭಿಪ್ರಾಯ 1956ರಲ್ಲಿ ಕರ್ನಾಟಕ ಏಕೀಕರಣಗೊಂಡ ದಿನದಿಂದಲೂ ವ್ಯಕ್ತವಾಗುತ್ತಲೇ ಇದ್ದರೂ, ಅಖಂಡ ಕರ್ನಾಟಕಕ್ಕೊಂದು ಅರ್ಥಪೂರ್ಣ ಹೆಸರು ಬೇಕೆನ್ನುವ ಕನ್ನಡ ಜನಪದದ ಅಪೇಕ್ಷೆ ಮೂರ್ತರೂಪಕ್ಕೆ ಬರಲು ಏಕೀಕರಣ ನಂತರದಲ್ಲಿ 17 ವರ್ಷಗಳು ಬೇಕಾದವು. 1973ರ ನವೆಂಬರ್ 1ರಂದು, ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಮೈಸೂರು ರಾಜ್ಯವನ್ನು ಕರ್ನಾಟಕ ಎಂದು ಅಧಿಕೃತವಾಗಿ ಕರೆಯಲಾಯಿತು.

ಮೈಸೂರು ರಾಜ್ಯ ಕರ್ನಾಟಕವಾಗಿ ರೂಪಾಂತರಗೊಳ್ಳಲಿಕ್ಕೆ ಹಲವು ಕಾರಣಗಳಿದ್ದವು. ಮೈಸೂರು ಎನ್ನುವ ಹೆಸರು ಒಂದು ಪ್ರಾಂತ್ಯದ ಹೆಸರನ್ನು ಸೂಚಿಸುವಂತಿತ್ತೇ ಹೊರತು, ಸಮಗ್ರ ಕರ್ನಾಟಕವನ್ನು ಸಂಕೇತಿಸುವಂತಿರಲಿಲ್ಲ. ಏಕೀಕರಣದ ನಂತರ ಕನ್ನಡ ನುಡಿ ಮತ್ತು ಸಂಸ್ಕೃತಿಯ ನೆಲೆಗಟ್ಟಿನಲ್ಲಿ ರೂಪುಗೊಂಡಿದ್ದ ಕನ್ನಡನಾಡನ್ನು ಅಖಂಡವಾಗಿ ಗುರ್ತಿಸುವ ಹೆಸರಿಗಾಗಿ ಹುಡುಕಾಟ ನಡೆದೇ ಇತ್ತು. ಮೈಸೂರು ರಾಜ್ಯವನ್ನು ಕರ್ನಾಟಕ ಎಂದು ಹೆಸರಿಸಬೇಕೆನ್ನುವ ಜನಸಾಮಾನ್ಯರ ಭಾವನೆಗಳಿಗೆ ಕನ್ನಡ ಚಳವಳಿಗಾರರು, ಲೇಖಕರು ಮತ್ತು ಪ್ರಾಜ್ಞ ರಾಜಕಾರಣಿಗಳು ಒತ್ತಾಸೆಯಾಗಿ ನಿಂತರು. ಆ ಒತ್ತಾಸೆ ಮತ್ತು ಹೋರಾಟದ ಫಲವಾಗಿ, ಕರ್ನಾಟಕ ಎನ್ನುವ ಹೆಸರಿಗೆ ಶಾಸನ ಸಭೆಗಳ ಅಂಗೀಕಾರ ದೊರೆಯಿತು. ಆ ಐತಿಹಾಸಿಕ ಘಟನೆಗೀಗ ಸುವರ್ಣ ಸಂಭ್ರಮ. ಈ ಸಂಭ್ರಮ ಕನ್ನಡದ ನಾಳೆಗಳನ್ನು ಕಟ್ಟುವುದಕ್ಕೆ ಪ್ರೇರಣೆಯಾಗಲಿ.